ಮಾರ್ಕೆಟ್ ರೇಟ್‌ನಲ್ಲಿ ಕಡಿಮೆ ಇತ್ತು ಎಂದರೆ ತಕ್ಷಣ ಆ ಕಂಪನಿಯನ್ನು ಬ್ಲಾಕ್ ಲಿಸ್ಟ್ ಮಾಡುತ್ತೇವೆ. ಒಂದೇ ಒಂದು ಉದಾಹರಣೆಯನ್ನು ಕಳುಹಿಸಿ.

**ಶ್ರೀ ಎಸ್.ಎಸ್. ಜೋಸರಾಜ್** : ನಮ್ಮ ಜಿಲ್ಲೆಯಲ್ಲಿ 97 ರೂಪಾಯಿ ಒಂದು ಕೆ.ಜಿ.ಗೆ ವ್ಯತ್ಯಾಸ ಇದೆ.

**ಶ್ರೀ ಬಂಡೆಪ್ಪ ಕಾಶೆಂಪೂರ್** : ನಾಳೆ ಬೆಳಿಗ್ಗೆ ಆ ಕಂಪನಿಯ ರೆಸಿಟ್ ಕೊಡಿ ಸಾಕು. ಮುಂದಿನ ಕ್ರಮ ನನ್ನ ಮೇಲಿ ಬಿಟ್ಟುಬಿಡಿ.

**ಉಪಾಧ್ಯಕ್ಷರು** : ಮಾನ್ಯ ಮಾಧುಸ್ವಾಮಿಯವರೇ, ತಾವು ಹೇಳಿ.

**(ಉ) ವಿಷಯ: ತಿಪಟೂರು ಎ.ಪಿ.ಎಂ.ಸಿ.ಯಲ್ಲಿ ಕೊಬ್ಬರಿ ಧಾರಣೆ ಕುಸಿದಿರುವುದರಿಂದ ರಾಜ್ಯದ ತೆಂಗು ಬೆಳೆಗಾರರಿಗೆ ಉಂಟಾಗಿರುವ ತೊಂದರೆ**

**ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ)** : ಮಾನ್ಯ ಉಪಾಧ್ಯಕ್ಷರೆ, ತಿಪಟೂರು ಎ.ಪಿ.ಎಂ.ಸಿ.ಯಲ್ಲಿ ಕೊಬ್ಬರಿ ಧಾರಣೆ ಕುಸಿದಿರುವುದರಿಂದ ರಾಜ್ಯದ ತೆಂಗು ಬೆಳೆಗಾರರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಮಾನ್ಯ ಕೃಷಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

**ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು)** : ಮಾನ್ಯ ಉಪಾಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ಈ ಹೇಳಿಕೆಯನ್ನು ಓದುತ್ತೇನೆ.

ಕೊಬ್ಬರಿ ವಹಿವಾಟಿಗೆ ತಿಪಟೂರು ಪ್ರಮುಖ ಮಾರುಕಟ್ಟೆಯಾಗಿರುತ್ತದೆ. ಕೇರಳ ರಾಜ್ಯದಲ್ಲಿ ತೆಂಗಿನ ಉತ್ಪನ್ನ ಹೆಚ್ಚು ಇದ್ದು ಅಲ್ಲಿನ ಕೊಬ್ಬರಿಗೆ ಸುಮಾರು ಕ್ವಿಂಟಾಲ್‌ಗೆ ಹಾಲಿ ದರ ರೂ.3200-00 ಇದೆ ಎಂದು ತಿಳಿದು ಬಂದಿದೆ. ಈ ಕೊಬ್ಬರಿ ಉತ್ತರ ಭಾರತದ ರಾಜ್ಯಗಳಿಗೆ ಸರಬರಾಜು ಆಗುತ್ತದೆ. ತಿಪಟೂರು ಕೊಬ್ಬರಿಯು ಪ್ರಸ್ತುತ ಅವಧಿಯಲ್ಲಿ ಸ್ವಲ್ಪ ತೇವಾಂಶದಿಂದ ಕೂಡಿದ್ದು, ಮತ್ತು ಉತ್ತರ ಭಾರತದ ರಾಜ್ಯಗಳಲ್ಲಿನ ಬಿಸಿಲಿನ ತಾಪ ಹೆಚ್ಚು ಇದ್ದು, ಈ ಕೊಬ್ಬರಿಯ ಉಪಯೋಗವು ಈ ಸಮಯಕ್ಕೆ ಸರಿ ಹೊಂದದೇ ಇರುವುದರಿಂದ ತಿಪಟೂರಿನ ಕೊಬ್ಬರಿಗೆ ಬೇಡಿಕೆ ಕಡಿಮೆ ಇರುತ್ತದೆ. ತೆಂಗಿನ ತುರಿ ಘಟಕಗಳಿಂದ ತೆಂಗಿನತುರಿ ಉತ್ಪಾದನೆ ಹೆಚ್ಚು ಇದ್ದು ಇದರ ಬಳಕೆಯಿಂದ ಕೊಬ್ಬರಿಯ ಬೇಡಿಕೆ ಕಡಿಮೆಯಾಗಿರುತ್ತದೆ. ಜುಲೈ ತಿಂಗಳಿನಿಂದ ಹೊರ ರಾಜ್ಯಗಳಿಂದ ತಿಪಟೂರು ಕೊಬ್ಬರಿ ಉತ್ಪನ್ನಕ್ಕೆ ಬೇಡಿಕೆ ಬರುವುದರಿಂದ ಹೆಚ್ಚು ಧಾರಣೆ ದೊರೆಯುವ ಸಂಭವವಿರುತ್ತದೆ.

ಪ್ರಸ್ತುತ ಸಾಲಿನಲ್ಲಿ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಕನಿಷ್ಠ ರೂ. 4,000-00 ಗರಿಷ್ಠ ರೂ. 5,100-00 ಮಾದರಿ ಧಾರಣೆ ರೂ. 5,000-00 ಇರುತ್ತದೆ. ಕೇಂದ್ರ ಸರ್ಕಾರವು ನಿಗದಿಪಡಿಸಿರುವ ರೂ 3,840-00 ಬೆಂಬಲ

ಬೆಲೆಗಿಂತ ಪ್ರಸ್ತುತ ಚಾಲ್ತಿಯಲ್ಲಿರುವ ಧಾರಣೆ ಹೆಚ್ಚಾಗಿರುತ್ತದೆ. ಕೇಂದ್ರ ಸರ್ಕಾರವು ನಿಗಧಿಪಡಿಸಿರುವ ಕನಿಷ್ಠ ಬೆಂಬಲ ಬೆಲೆಗಿಂತ ಮಾರುಕಟ್ಟೆಗಳಲ್ಲಿ ಬೆಲೆಗಳು ಕಡಿಮೆಯಾದಾಗ ಮಾರುಕಟ್ಟೆ ಮಧ್ಯಪ್ರದೇಶ ಯೋಜನೆಯಡಿ ಖರೀದಿ ಪ್ರಾರಂಭಿಸಲು ಅವಕಾಶವಿರುತ್ತದೆ. ಹಿಂದಿನಿಂದಲೂ ಇದೇ ಪದ್ಧತಿಯನ್ನು ಅನುಸರಿಸಿಕೊಂಡು ಬರಲಾಗುತ್ತಿದೆ.

ಕಾನೂನುಬಾಹಿರ ವ್ಯವಹಾರ ತಡೆಗಟ್ಟುವ ಸಂಬಂಧ ತಿಪಟೂರು ಮಾರುಕಟ್ಟೆ ವ್ಯಾಪ್ತಿಯಲ್ಲಿ ವಾಣಿಜ್ಯ ತೆರಿಗೆ ಇಲಾಖೆ ವತಿಯಿಂದ ತೆರಿಗೆ ಸೋರಿಕೆ ತಡೆಗಟ್ಟಲು ಪ್ರತಿ ವರ್ಷ ಮಾರುಕಟ್ಟೆ ಪ್ರಾಂಗಣದಲ್ಲಿ ಕ್ರಮ ಜರುಗಿಸುತ್ತಿದ್ದು, ಚುನಾಯಿತ ಮಾರುಕಟ್ಟೆ ಸಮಿತಿಯು ಇವರೊಂದಿಗೆ ಸಹಕರಿಸಿ ಮಾರುಕಟ್ಟೆ ಶುಲ್ಕ ಸೋರಿಕೆಯಾಗದಂತೆ ನಿಯಂತ್ರಣಾತ್ಮಕ ಕ್ರಮಗಳನ್ನು ಜರುಗಿಸುತ್ತಿದೆ. ಈ ರೀತಿಯ ಕಾನೂನು ಬಾಹಿರ ವ್ಯವಹಾರಗಳ ಬಗ್ಗೆ ನಿರ್ದಿಷ್ಟ ಪ್ರಕರಣಗಳ ಮಾಹಿತಿಯನ್ನು ಸರ್ಕಾರದ ಗಮನಕ್ಕೆ ತಂದಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

**ಶ್ರೀ ಜೆ.ಸಿ. ಮಾಧುಸ್ವಾಮಿ :** ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳ ಮಾತನ್ನು ನಾನು ಪೂರ್ಣವಾಗಿ ಒಪ್ಪುವುದಕ್ಕೆ ಆಗುವುದಿಲ್ಲ. ಏಕೆಂದರೆ ತಿಪಟೂರು ಕೊಬ್ಬರಿ ತೇವಾಂಶ ಜಾಸ್ತಿ ಇದೆ ಎಂದಲ್ಲ. ಕಳೆದ ಎರಡು ಮೂರು ವರ್ಷ ಮಳೆಯಾಗದೆ ಅಂಡರ್‌ಗ್ರೌಂಡ್ ವಾಟರ್ ಡೆವಲಪ್ ಆಗದೆ ಕೊಬ್ಬರಿ ಕೆಂಪಾಗಿದೆ ಎಂದು ನಮ್ಮ ಹತ್ತಿರ ಕೊಬ್ಬರಿ ತೆಗೆದುಕೊಳ್ಳುವುದು ಕಡಿಮೆಯಾಗಿತ್ತು. ಮತ್ತೆ ಈಗ ಪ್ರೊಡಕ್ಷನ್ ಕೂಡ ಜಾಸ್ತಿಯಿಲ್ಲ. ಕೋಕನಟ್ ಪ್ರೊಡಕ್ಷನ್ ಬಗ್ಗೆ ತಾವು ಫಿಗರ್ಸ್ ತರಿಸಿ ನೋಡಬೇಕು ಹೇರಳವಾಗಿ ಈ ರಾಜ್ಯದಲ್ಲಿ ಬಿದ್ದುಹೋಗಿದೆ. ತಿಪಟೂರಿನಲ್ಲಿ ಕೊಬ್ಬರಿ ಧಾರಣೆ ಕಡಿಮೆಯಾಗಿದೆ ಎಂದರೆ ಒಂದು ಮಾರುಕಟ್ಟೆ ಆವರಣದಲ್ಲಿ ಕೊಬ್ಬರಿ ವ್ಯವಹಾರನೇ ಕಡಿಮೆಯಾಗಿದೆ ಮತ್ತು ಸ್ಥಗಿತವಾಗಿದೆ. ಅದಕ್ಕೆ ಕಾರಣ, ಹೊರಗಡೆ ಕೊಬ್ಬರಿ ತೆಗೆದುಕೊಳ್ಳುವುದು ಹಾಗೂ ರವಾನೆ ಮಾಡುವುದು. ಇನ್ನು ಎರಡನೆಯದಾಗಿ ಮಾರುಕಟ್ಟೆ ಒಳಗಡೆ ಏನು ಕೊಬ್ಬರಿ ತೆಗೆದುಕೊಳ್ಳುತ್ತಾರಲ್ಲಾ, ಅವರೂ ಕೂಡ ಟ್ಯಾಕ್ಸ್ ಅವೈಡ್ ಮಾಡುವುದಕ್ಕೆ ನಂಬರ್ 2 ದಂಧೆ ಮಾಡುತ್ತಿರುವುದು. ಅದರ ಪರಿಣಾಮವಾಗಿ ಯಾರು ರೆಗ್ಯುಲರ್ ಆಗಿ ಮಾರ್ಕೆಟ್‌ನಲ್ಲಿ ಟ್ರೇಡಿಂಗ್ ಇಟ್ಟುಕೊಂಡಿದ್ದರು, ಅವರೆಲ್ಲಾ ಹತಾಶರಾಗಿದ್ದಾರೆ ಇವತ್ತು. ನಮಗೆ ಶಕ್ತಿ ಇಲ್ಲ, ನಾವು ಈಗ ನಂಬರ್ 2 ನಲ್ಲಿ ಮಾಡಬಾರದು ಎನ್ನುವ ಭಾವನೆ ಅವರಲ್ಲಿ ಯಾರಿಗಾದರೂ ಇದ್ದರೆ, ನಾವು ಟ್ರೇಡಿಂಗೇ ಬಿಡಬೇಕು ಎನ್ನುವ ಸ್ಥಿತಿ

ಬಂದುಬಿಟ್ಟಿದೆ. ನಾನು ಸನ್ಮಾನ್ಯ ಯಡಿಯೂರಪ್ಪನವರನ್ನು ಕೇಳಿದೆ, ಟ್ಯಾಕ್ಸ್ ಏನಾದರೂ ಕಡಿಮೆ ಮಾಡಿ ಇಲ್ಲದೇ ತಿಪಟೂರು ಮಾರ್ಕೆಟ್ ಹಾಳಾಗಿ ಹೋಗುತ್ತದೆ, ಕೊಬ್ಬರಿ ನಂಬರ್ 2 ರಲ್ಲಿ ಹೋಗುವುದನ್ನು ನಿಲ್ಲಿಸುವುದ ಕ್ಕಾಗುವುದಿಲ್ಲ ಎಂದು. In addition to this, ನಿಮ್ಮ ಆ ಮಾತು ಒಪ್ಪುತ್ತೇನೆ, 3,600 ರೂಪಾಯಿ ಕೇರಳ ಕೊಬ್ಬರಿಗೆ ಇದೆ. ನಮಗೆ ಲಾಸ್ಟ್ ಇಯರ್ 9,000 ರಿಂದ 9,500 ರೂಪಾಯಿ ಕೊಬ್ಬರಿ ಧಾರಣೆ ಇದ್ದದ್ದು ಈಗ 4,600 ರಿಂದ 4,900 ರೂಪಾಯಿ ಇದೆ. ಒಂದು ಕಡೆ ಕೊಬ್ಬರಿ ಇಲ್ಲ. ಅದಕ್ಕೆ ನುಸಿಪೀಡೆ ಕಾರಣ, ಬರಗಾಲ ಕಾರಣ, ಕೊಬ್ಬರಿನೇ ಇಲ್ಲ, ಕೊಬ್ಬರಿ ಇದ್ದರೂ ಸೈಜ್ ಇಲ್ಲ ಹಾಗೂ ತೂಕ ಬರುವುದಿಲ್ಲ. ನಾವು ಒಂದು ಸಾವಿರ ಕಾಯಿ ಸುಲಿದರೆ 180 ಕೆ.ಜಿ.ವರೆಗೆ ಕೊಬ್ಬರಿ ಬರುತ್ತಿತ್ತು. ಆದರೆ ಈಗ 90 ಕೆ.ಜಿ. ಬರುತ್ತಿಲ್ಲ, ಮಾನ್ಯ ಪ್ರಕಾಶ್‌ರವರೇ ಇದು ವಾಸ್ತವ ಪರಿಸ್ಥಿತಿ. ಒಂದು ಕಡೆ ಧಾರಣೆ ಇಲ್ಲ, ಒಂದು ಕಡೆ ಪ್ರೊಡಕ್ಷನ್ ಇಲ್ಲ, ಒಂದು ಕಡೆ ಸೈಜ್ ಇಲ್ಲ, ಈ ಸ್ಥಿತಿನಲ್ಲಿ ಕೊಬ್ಬರಿ ಮಾರ್ಕೆಟ್‌ನಲ್ಲಿ ಏನಾಗಿದೆ ಎಂದರೆ ನನಗೆ ಗೊತ್ತಿರುವ ಪ್ರಕಾರ ಹಾಗೂ ನನಗೆ ಬೇರೆಯವರು ಹೇಳಿದ ಪ್ರಕಾರ ಏಕಪ್ಪಾ ಇಷ್ಟೊಂದು ಬಿದ್ದುಹೋಯಿತೆಂದರೆ ಕೇರಳ ಕೊಬ್ಬರಿಯನ್ನು ಇದಕ್ಕೆ ಮಿಕ್ಸ್ ಮಾಡಿ ರವಾನೆಯಾಗುತ್ತಿದೆ. ನಮ್ಮ ಕೊಬ್ಬರಿಗೂ ಕೇರಳ ಕೊಬ್ಬರಿಗೂ ಬಹಳ ವ್ಯತ್ಯಾಸ ಇದೆ. ನಾವು ಹನ್ನೊಂದು ತಿಂಗಳು ಅದನ್ನು ನ್ಯಾಚುರಲ್ಲಾಗಿ ಡ್ರೈ ಮಾಡಿ Ball copra ವನ್ನು ತಿನ್ನುವ ಪರ್ಪಸ್‌ಗೆ ಮಾರುತ್ತಿದ್ದೆವು ಕೇರಳದವರು ಹಾಗಲ್ಲ, ಕೇರಳ ಕೊಬ್ಬರಿ 15 ದಿವಸಕ್ಕೆ ತಿಂಗಳಿಗೆ ಕೊಬ್ಬರಿ ಮಾಡುವಂತಹ ಸ್ಥಿತಿ ಇದೆ. ಕೇರಳ ಕೊಬ್ಬರಿ ಆಯಿಲ್‌ಗೆ, ತುರಿಗೆ ನೀವು ಹೇಳಿದ್ದೀರಿ Desiccated coconut ಗೆ ಅಂತ ಹೇಳಿ. ಅದಕ್ಕೆ ಬಳಸಬೇಕಾಗಿರುವಂತಾದ್ದು ದಪ್ಪ ಜಾಸ್ತಿ ಇರುತ್ತಿತ್ತು, ಅದನ್ನು ತಿನ್ನುವುದಕ್ಕೆ ಆಗುತ್ತಿರಲಿಲ್ಲ, ಅಂತಹ ಕೊಬ್ಬರಿಯನ್ನು ತಮ್ಮ ಕೊಬ್ಬರಿ ಜೊತೆ ಸೇರಿಸಿ ರವಾನೆ ಮಾಡುತ್ತಿರುವುದರಿಂದ buyers ಬರುತ್ತಿಲ್ಲ. ಹೊರಗಡೆ ಈ ಕೊಬ್ಬರಿಗೆ ಡಿಮ್ಯಾಂಡ್ ಬರುತ್ತಿಲ್ಲ ಎಂದು ಹೇಳುತ್ತಾರೆ. ಈ ಸ್ಥಿತಿ ನಿರ್ಮಾಣವಾದರೆ ರಾಜ್ಯದಲ್ಲಿ ಕೊಬ್ಬರಿ ಬೆಳೆಯುತ್ತಿರುವವರು ಯಾರೂ ತಲೆ ಎತ್ತಿ ಬಾಳುವುದಕ್ಕೆ ಆಗುವುದಿಲ್ಲ. ನಾವು ನಿಮಗೆ ಒತ್ತಾಯ ಮಾಡುವುದು, ತಾವು ಹೇಳಿದ್ದೀರಿ ನಾವು ನಿಗಾ ಇಟ್ಟಿದ್ದೇವೆ, ಮಾಡುತ್ತಿದ್ದೇವೆ ಎಂದು. ಇದೆಲ್ಲಾ ವಾಸ್ತವವಾಗಿ ಸುಳ್ಳು. ನಾನು ಸನ್ಮಾನ್ಯ ರಾಜಶೇಖರ ಮೂರ್ತಿಯವರಿಗೆ ಬಹಳ ಗೌರವವನ್ನು ಏಕೆ ಕೊಡುತ್ತೇನೆಂದರೆ ಅವತ್ತು ನಾವು ಇಲ್ಲಿ ಒಂದು ಮಾತು ಹೇಳಿದ ತಕ್ಷಣ

ಸ್ಕ್ವಾಡ್ ಹಾಕಿದರು. ಒಂದೇ ಒಂದು ಮಾತು ಅಸೆಂಬ್ಲಿಯಲ್ಲಿ ಮಾತನಾಡಿದಾಗ ಇಡೀ ಮಾರುಕಟ್ಟೆಯಲ್ಲಿ ಇದ್ದಂತಹ ನಂಬರ್–2 ಬಂದ್ ಮಾಡಿದರು. Hats off to him. --- ಯಾರಾದರೂ ಆಗಿರಲಿ. ಅವರ ಒಂದು ಮಾತಿಗೆ ಮಾಡಿದರು. ಆದರೆ ಇವತ್ತು ಆ ಸ್ಥಿತಿ ಇಲ್ಲ. ತಾವು ಮಾಹಿತಿ ತರಿಸಿ. ವರ್ಷ ವರ್ಷ ಒಬ್ಬೊಬ್ಬರು, ಇಬ್ಬಿಬ್ಬರು ಮೂರ್ಮೂರು ಜನ ಕೊಬ್ಬರಿ ಟ್ರೇಡ್ ಮಾಡುತ್ತೇವೆಂದು ಬರುವುದು 2 ಕೋಟಿ, 3 ಕೋಟಿ, 4 ಕೋಟಿ ರೂಪಾಯಿ ನಷ್ಟವಾಯಿತು ಎನ್ನುವುದು, ಅವರ್ಯಾರೋ ಕಮಿಷನ್ ಏಜೆಂಟ್ಸ್‌ಗೆ ದುಡ್ಡು ಕೊಡದೇ ಹೋಗುವುದು. ಅವರು ರೈತರಿಗೆ ದುಡ್ಡು ಕೊಡದೇ ಹೋಗುವುದು, ಈ ಸ್ಥಿತಿಗೆ ತಿಪಟೂರು ಮಾರುಕಟ್ಟೆ ಬಂದಿದೆ. ತಾವೇನಾದರೂ ಇದರ ಬಗ್ಗೆ ತನಿಖೆ ಮಾಡಿಸುತ್ತೀರಾ? ಟ್ಯಾಕ್ಸ್‌ಎವೇಷನ್ ಎಷ್ಟು ಆಗಿದೆ ಅದನ್ನು ಸರ್ಕಾರಕ್ಕೆ ತರುತ್ತೀರಾ? ಯಾರ್ಯಾರು ಟ್ಯಾಕ್ಸ್‌ಎವೇಟ್ ಮಾಡುತ್ತಾರೆ ಅದರ ಬಗ್ಗೆ ಶಿಸ್ತು ಕ್ರಮ ಜರುಗಿಸುತ್ತೀರಾ ಮತ್ತು ಕೇರಳ ಕೊಬ್ಬರಿ ತೆಗೆದುಕೊಂಡು ಬಂದು ತಿಪಟೂರು ಕೊಬ್ಬರಿಗೆ ಮಿಕ್ಸ್ ಮಾಡುತ್ತಿರುವುದು, ಇದನ್ನೇನಾದರೂ ಮಾಡಿ ಅವಾಯ್ಡ್ ಮಾಡುತ್ತೀರಾ? ಬೆಳೇನೆ ಇಲ್ಲ ಸತ್ತು ಹೋಗುತ್ತಿದ್ದೇವೆ ಎನ್ನುವಂತಹ ಸ್ಥಿತಿಯಲ್ಲಿರುವಾಗ ಇರುವುದೂ ಕೂಡ ಬಂದ್ ಆಗಿಬಿಟ್ಟರೆ ನಮ್ಮ ಗತಿ ಏನು? ಇದರ ಬಗ್ಗೆ ಏನಾದರೂ ಮಾಡದೆ ಹೋದರೆ ರೈತರಿಗೆ ನಿಜವಾಗಿ ಉಳಿಗಾಲವಿಲ್ಲ. ಸಪೋರ್ಟ್ ಪ್ರೈಸ್ ಬಗ್ಗೆ ಮಾತನಾಡಿ. ಎರಡು ವರ್ಷದಿಂದ ನಿಗದಿಯಾಗಿರುವುದು 3600 ರೂಪಾಯಿ; ಈಗ ಆ ಸಪೋರ್ಟ್ ಪ್ರೈಸನ್ನು ಏನಾದರೂ ಜಾಸ್ತಿ ಮಾಡಿಕೊಡುತ್ತೀರಾ? ಹೋದವರ್ಷ ಆರೂವರೆ ಏಳು ಸಾವಿರ ರೂಪಾಯಿಗೆ ತೆಂಗಿನ ಕಾಯಿ ವ್ಯಾಪಾರವಾಗುತ್ತಿತ್ತು; ಇವತ್ತು ಮೂರು ಸಾವಿರ ರೂಪಾಯಿಗೆ ಕೇಳುವವರು ದಿಕ್ಕಿಲ್ಲ. ಯಾವುದೇ ಅದ್ಭುತವಾದ ಇಂಪ್ರೂವ್‌ಮೆಂಟ್ ಪ್ರೊಡಕ್ಷನ್‌ನಲ್ಲಿ ಆಗಿಲ್ಲ. ಇದರ ಬಗ್ಗೆ ಏನಾದರೂ ಸರ್ಕಾರ ಗಮನಕ್ಕೆ ತೆಗೆದುಕೊಂಡು ರೈತರ ರಕ್ಷಣೆಗೆ ಬರುತ್ತೀರಾ ಇಲ್ಲವಾ? ಏಕೆಂದರೆ ನೀವು ಕೊಟ್ಟಿರುವಂತಹ ಉತ್ತರ ದಯವಿಟ್ಟು ಕ್ಷಮಿಸಬೇಕು ನಾನು ಕೌಂಟರ್ ಮಾಡುತ್ತಿಲ್ಲ. ಆದರೆ ಸತ್ಯಕ್ಕೆ ಬಹಳ ದೂರವಾಗಿ ಇದೆ; ವಾಸ್ತವದಿಂದ ಆಚೆಗೆ ಇದೆ. ತಿಪಟೂರಿನಲ್ಲಿ ನಂಬರ್ 2 ದಂಧೆಯನ್ನು ತಾವು ರದ್ದು ಮಾಡದೇ ಹೋದರೆ, ಪ್ಲಸ್ ತಿಪಟೂರಿನಿಂದ ಆಚೆಗೆ ಅಥವಾ ಕೊಬ್ಬರಿ ಬೆಳೆಯುವಂಥ ಏರಿಯಾಗಳಲ್ಲಿ ಎ.ಪಿ.ಎಂ.ಸಿ. ಏನು ಇದೆ, ಅದರ ವ್ಯಾಪ್ತಿಯಿಂದ, ಹಳ್ಳಿಯಿಂದ, ನನ್ನದೇ ಕೊಬ್ಬರಿ ಎಂದು ಹೇಳಿ, ರವಾನೆ ಆಗುತ್ತಿರುವಂಥ ಕೊಬ್ಬರಿಯನ್ನು ತಾವು ತಪ್ಪಿಸದೇ ಹೋದರೆ, ಮಾರುಕಟ್ಟೆಯೂ ಉಳಿಯುವುದಿಲ್ಲ, ಅವರಿಗೆ

ಮೂರು ಕಾಸಿನ ವರಮಾನವು ಬರುವುದಿಲ್ಲ. ಈ ಕಡೆ ರೈತರು ಉಳಿಯುವುದಿಲ್ಲ, ಮತ್ತೆ ಗೌರವಸ್ಥರು ಹೇಗೆ ಟ್ರೆಡ್ ಮಾಡುತ್ತಾರೆ? ಇನ್ನು ಅವರು ಮುಂದೆ ಯಾರೂ ಟ್ರೇಡಿಂಗ್‌ನಲ್ಲಿ ಇರುವುದಿಲ್ಲ. ಇವರು ಮರ್ಯಾದೆಗೆ ಅಂಜಿಕೊಂಡು ನಾನು ಅಕೌಂಟ್ ಕೊಡುತ್ತೇನೆ, ನಾನು ಇನ್‌ಕಂ ಟ್ಯಾಕ್ಸ್ ಕೊಡುತ್ತೇನೆ; ನಾನು ಟರ್ನ್ ಓವರ್ ಟ್ಯಾಕ್ಸ್ ಅನ್ನು ಕೊಡುತ್ತೇನೆಂದು ಹೇಳುವವರು ಇವತ್ತು ಯಾರೂ ಕಾಂಪಿಟೇಷನ್‌ನಲ್ಲಿ ಉಳಿಯಲಾರದಂಥ ಸ್ಥಿತಿ ನಿರ್ಮಾಣವಾಗಿದೆ. ಅದು ತಿಪಟೂರು, ಅರಸೀಕೆರೆಯ ಭಾಗಗಳಲ್ಲಿ ಆಗಿದೆ. ತಾವು ಈ ಬಗ್ಗೆ ಏನಾದರೂ ನಮ್ಮ ರಕ್ಷಣೆಗೆ ಬರುತ್ತಿರಾ, ಇಲ್ಲವಾ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ತಾವು ನಮ್ಮ ರಕ್ಷಣೆಗೆ ಬರುವುದಾದರೆ, ಎರಡು ವರ್ಷದಿಂದ ಇದುವರೆಗೂ ಆಗಿರುವಂತಹ ಟ್ರೇಡ್, ಎರಡೂ ವರ್ಷದಿಂದ ಇದುವರೆಗೂ ಆಗಿರುವಂತಹ ವ್ಯವಹಾರ, ಅಲ್ಲಿ ಮಾರ್ಕೆಟ್ ಸೆಸ್ ಎಷ್ಟು ಬಂದಿದೆ, ಟ್ಯಾಕ್ಸ್ ಎಷ್ಟು ಬಂದಿದೆ, ಕೊಬ್ಬರಿ ಎಷ್ಟು ಬೆಕರಿಯಾಗಿದೆ, ಈ ಎಲ್ಲಾ ವಿಷಯಗಳ ಬಗ್ಗೆ ತಾವು ಸದನದಲ್ಲಿ ಮಂಡಿಸಬೇಕು.

**ಶ್ರೀ ಶರಣಬಸಪ್ಪ ದರ್ಶನಾಪುರ :** ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದಂಥ ಮಾಧುಸ್ವಾಮಿಯವರು ಹೇಳಿದ ಹಾಗೆ, ಇವತ್ತು ಕೊಬ್ಬರಿ ಬೆಲೆಯು ಕಳೆದ ವರ್ಷ ಮೇ, ಜೂನ್ ತಿಂಗಳಲ್ಲಿ ಸುಮಾರು 7,500 ರೂಪಾಯಿಗಳವರೆಗೆ ಇತ್ತು. ಈ ವರ್ಷ ಅದು 5,000 ರೂಪಾಯಿಗಳು ಆಗಿದೆ. ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ಕೇರಳದಲ್ಲಿ 3,200 ರೂಪಾಯಿಗಳಿಗೆ ಪ್ರತಿ ಕ್ವಿಂಟಾಲ್ ಕೊಬ್ಬರಿ ಸಿಗುತ್ತಿದೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಂಥ ವಿಚಾರವು ನನ್ನ ಕಿವಿಗೆ ಬಿದ್ದಿದೆ. ಇವತ್ತು ಕೇರಳದಿಂದ ಕೊಬ್ಬರಿಯನ್ನು ತಂದು, ಇಲ್ಲಿ ಮಿಕ್ಸ್ ಮಾಡಿ ಕಳುಹಿಸುವಂಥಾದ್ದು ನನ್ನ ಗಮನಕ್ಕೆ ಬಂದಿದೆ. ನಾನು ಇವತ್ತು ನಮ್ಮ ಎಲ್ಲಾ ಅಧಿಕಾರಿಗಳ ಜೊತೆಗೆ ಮಾತನಾಡಿದ್ದೇವೆ. ಕಳೆದ ಮೂರು ವರ್ಷಗಳಲ್ಲಿ ಸಂಪೂರ್ಣವಾಗಿ ತಿಪಟೂರಿನಲ್ಲಿ ಬರುವಂಥ ಮಾರುಕಟ್ಟೆ, ಮತ್ತು ಉಪ ಮಾರುಕಟ್ಟೆಗಳ ಸಂಪೂರ್ಣವಾದಂತಹ ಮಾಹಿತಿಯನ್ನು ನಮಗೆ ತಂದು ಕೊಡಬೇಕು. ಇಲ್ಲಿ ಕೊಬ್ಬರಿ ಮಿಕ್ಸಿಂಗ್ ಬಗ್ಗೆ ನಮ್ಮ ಕಿವಿಗೆ ಏನು ವಿಷಯ ಬಿದ್ದಿದೆ, ಅದರ ಬಗ್ಗೆ ನಮಗೆ ಸಂಪೂರ್ಣವಾದ ವರದಿಯನ್ನು ಎನ್‌ಫೋರ್ಸ್‌ಮೆಂಟ್ ಸೆಲ್‌ನವರಿಗೂ ಕೂಡ ನಾವು ಇವತ್ತು ಹೇಳಿದ್ದೇವೆ. ನಾಳೆ, ಅಥವಾ ನಾಡಿದ್ದು ಇದರ ಬಗ್ಗೆ ನಿಮಗೆ ಏನು ಅನುಮಾನ ಇದೆ, ಇದು ನನ್ನ ಕಿವಿಗೂ ಬಿದ್ದಿರುವುದರಿಂದ, ಇದಕ್ಕೆ ಸಂಬಂಧಪಟ್ಟ ಮಾಹಿತಿ ದೊರಕಬಹುದು. ತಾವೂ ಕೂಡ ಇವತ್ತು

ತೆಂಗು ಬೆಳೆಯ ಬಗ್ಗೆ ಕಾರಣಗಳನ್ನು ಹೇಳಿದ್ದೀರಿ. ಇದಕ್ಕೆ ನುಸಿ ರೋಗವಿರಬಹುದು, ಮತ್ತು ಶ್ರೀಲಂಕಾದಿಂದ ಹೆಚ್ಚಿಗೆ ತಮಿಳುನಾಡಿಗೆ, ಕೇರಳಕ್ಕೆ ಈ ತುರಿ ಬರುವುದರಿಂದ ಇವತ್ತು ಇದರ ರೇಟ್ ಕೂಡ ಕಡಿಮೆಯಾಗಿದೆ. ಈ ವಿಷಯದಲ್ಲಿ ಇವತ್ತು ನಾವು ಗಂಭೀರವಾಗಿ ಚಿಂತನೆಯನ್ನು ಮಾಡಬೇಕಾಗಿದೆ. ನಮಗೆ ಒಂದು ವಾರ ಕಾಲಾವಕಾಶವನ್ನು ಕೊಟ್ಟರೆ, ತಮಗೆ ಏನು ಮಾಹಿತಿಯನ್ನು ಕೇಳಿದ್ದೀರಿ, ಆ ಸಂಪೂರ್ಣವಾದ ಮಾಹಿತಿಯನ್ನು ತಮಗೆ ಒದಗಿಸಲು ಕೆಲಸ ಮಾಡುತ್ತೇವೆ. ಈ ಕೊಬ್ಬರಿ ಬೆಳೆಗಾರರ ರಕ್ಷಣೆಗೆ ಬರತಕ್ಕಂಥ ಕೆಲಸವನ್ನು ನಮ್ಮ ಸರ್ಕಾರದ ವತಿಯಿಂದ ಮಾಡುತ್ತೇವೆಂಬ ಮಾತನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

**ಶ್ರೀ ಬಿ. ನಂಜಾಮರಿ (ತಿಪಟೂರು)** : ಮಾನ್ಯ ಉಪಾಧ್ಯಕ್ಷರೆ, ತಿಪಟೂರಿನಲ್ಲಿ ಕೊಬ್ಬರಿ ಬೆಳೆ ನನಗೆ ಸಂಬಂಧಪಟ್ಟಿರುವಂಥಾದ್ದು. ನಾನೂ ಕೂಡ ಈ ವ್ಯಾಪಾರಕ್ಕೆ ಸಂಬಂಧಪಟ್ಟಂಥವನು; ನಾನು ಇದರ ಬಗ್ಗೆ ಏನೆಂಬುದನ್ನು ಹೇಳುತ್ತೇನೆ. ತಿಪಟೂರಿನಲ್ಲಿ ಕೊಬ್ಬರಿ ಬೆಲೆ ಕಡಿಮೆ ಆಗುವುದಕ್ಕೆ ಈ ಎರಡು ವರ್ಷಗಳಲ್ಲಿ ಈ ಬೆಳೆಯೇ ಕಡಿಮೆಯಾಗಿತ್ತು. ಕೇರಳದಲ್ಲಿ, ತಮಿಳುನಾಡಿನಲ್ಲಿ, ಮೂರು ಸಾವಿರ ರೂಪಾಯಿಗಳಿಗೆ ಕಾಯಿಯನ್ನು ಕೊಡುತ್ತಿದ್ದರು. ಇವತ್ತು ತಿಪಟೂರಿನಲ್ಲಿ 30 ರಿಂದ 40 ಫ್ಯಾಕ್ಟರಿಗಳು ಕಾಯಿ ತುರಿ ಪೌಡರ್ ಅನ್ನು ಮಾಡುತ್ತಿದ್ದೇವೆ. ಕರ್ನಾಟಕದ ಕಾಯಿ ಒಂದನ್ನೂ ಖರೀದಿ ಮಾಡುತ್ತಿಲ್ಲ. ಈ ಕಾಯಿಯನ್ನು ಏಕೆ ಖರೀದಿ ಮಾಡುತ್ತಿಲ್ಲವೆಂದರೆ, ಫ್ಯಾಕ್ಟರಿಯವರಿಗೆ ತಮಿಳುನಾಡಿನವರ ಮೇಲೆ ಕೇರಳದವರ ಮೇಲೆ ಕಾಂಪೀಟ್ ವರ್ತಕರು ಮಾಡುವುದಕ್ಕೆ ಆಗುತ್ತಿಲ್ಲ. ಆದುದರಿಂದ ನಾವು ಅದೇ ಕಾಯಿಯನ್ನು ತರಿಸಿಕೊಂಡು ಇವತ್ತು ಪೌಡರ್ ಅನ್ನು ಮಾಡುತ್ತಿರುವುದರಿಂದ, ತಿಪಟೂರಿನಲ್ಲಿರುವಂತಹ ಸುಮಾರು 20 ಸಾವಿರ ಜನರಿಗೆ ಕೂಲಿಯನ್ನು ಕೊಡುತ್ತಿದ್ದಾರೆ. ಇದನ್ನು ಸರ್ಕಾರ ಕೊಡುವುದಕ್ಕೆ ಆಗುವುದಿಲ್ಲ; ಇಂಥಾದ್ದನ್ನು ಆ ಫ್ಯಾಕ್ಟರಿಯವರು ಇವತ್ತು ಮಾಡದೇ ಇದ್ದರೆ ಪರಿಸ್ಥಿತಿ ಬೇರೆಯಾಗುತ್ತಿತ್ತು. ಅಲ್ಲಿಂದ ಕಾಯಿಯನ್ನು ಇಲ್ಲಿಗೆ ತಂದು ಮಾಡಬಾರದೆಂದು ಯಾವುದೇ ಕಾನೂನಿನಲ್ಲಿ, ಬೈಂಡಿಂಗ್ ಇಲ್ಲ. ಯಾವ ರಾಜ್ಯದಲ್ಲಿ ಬೇಕಾದರೂ ಯಾವ ಪದಾರ್ಥವನ್ನು ಕೊಂಡು ತಂದು ಇಲ್ಲಿ ವ್ಯಾಪಾರಸ್ಥರು ವ್ಯಾಪಾರ ಮಾಡಬಹುದು. ಅದನ್ನು ಮಿಕ್ಸಿಂಗ್ ಮಾಡುತ್ತಿಲ್ಲ ಅವರೇ ಕಾಯಿಯನ್ನು ತಂದು, ಪೌಡರ್ ಅನ್ನು ಮಾಡಿ, ಅವರೇ ರವಾನೆ ಮಾಡುತ್ತಿದ್ದಾರೆ. ನಾನು ಅದರಲ್ಲಿ ಇರುವುದರಿಂದ ಹೇಳುತ್ತಿದ್ದೇನೆ. ದಯವಿಟ್ಟು ಆ ರೀತಿ ಏನೂ ಇಲ್ಲ, ಯಾವುದೇ

ಹಳ್ಳಿಯಲ್ಲಿ ಹೋಗುತ್ತಾ ಇಲ್ಲ. ಅದು ಸಬ್ ಮಾರ್ಕೆಟ್‌ಗೆ ಇಡೀ ಕರ್ನಾಟಕ ರಾಜ್ಯದಲ್ಲಿ, ಹಾಸನ ಜಿಲ್ಲೆಯಲ್ಲಿ, ಮಂಡ್ಯ ಜಿಲ್ಲೆ, ತುಮಕೂರು ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ, ಚಿತ್ರದುರ್ಗ ಜಿಲ್ಲೆ, ಎಲ್ಲಾ ಕಡೆ ತಾಲ್ಲೂಕುಗಳಲ್ಲಿ ಸಬ್ ಮಾರ್ಕೆಟ್‌ಗಳಾಗಿ ಅಲ್ಲಲ್ಲಿಯೇ ಕೊಬ್ಬರಿ ಹೋಗುತ್ತಾ ಇದೆ. ಯಾವುದೇ ಹಳ್ಳಿಗಳಿಂದ ಹೋಗುತ್ತಾ ಇಲ್ಲ. ಇದು ಕೇರಳದಲ್ಲಿ ಆಗುತ್ತಿರುವಂಥಾದ್ದು ಏನೆಂದರೆ, ನಮ್ಮ ಕೊಬ್ಬರಿ ಕೇರಳದ ಮಟ್ಟದಲ್ಲಿ ಇರಲಿಲ್ಲ. ಕೇರಳದಲ್ಲಿ 3,500 ರೂಪಾಯಿಗಳಿಂದ 4,000 ರೂಪಾಯಿಗಳಿಗೆ ಕೊಬ್ಬರಿ ಬೆಲೆ ಇದ್ದಾಗ ನಮ್ಮಲ್ಲಿ 6,000 ರೂಪಾಯಿಗಳಿಂದ 8,000 ರೂಪಾಯಿಗಳವರೆಗೆ ಒಂದು ವರ್ಷ ಪೂರ್ತಿ ಈ ಬೆಲೆಯಲ್ಲಿ ಇತ್ತು. ಆದುದರಿಂದ ನಮ್ಮ ಕೊಬ್ಬರಿಗೆ ಬೆಲೆ ಬರಲಿಲ್ಲ; ಆದರೂ ಸಹಿತ ನಮ್ಮಲ್ಲಿ ಕೊಬ್ಬರಿ ಬೆಳೆ ಇಲ್ಲದೇ ಇದ್ದುದ್ದರಿಂದ ಆ ರೇಟ್‌ಗೆ ಬಂತು; ಇಲ್ಲವೆಂದರೆ ಯಾವತ್ತೋ 4,000 ರೂಪಾಯಿಗಳಿಗೆ ತಿಪಟೂರಿನಲ್ಲಿ ಆಗಬೇಕಾಗಿತ್ತು. ಮೇ–ಜೂನ್ ತಿಂಗಳಲ್ಲಿ ಬಿಸಿಲು ಬಂದು ನಾರ್ತ್ ಇಂಡಿಯಾದಲ್ಲಿ ಯಾರೂ ಕೊಬ್ಬರಿಯನ್ನು ತಿನ್ನುವುದಿಲ್ಲ. ಇದರ ಅನುಭವ ನನಗೆ ಇದೆ, ಏಕೆಂದರೆ ನಾನು ವ್ಯಾಪಾರ ಮಾಡಿ, ಇಲ್ಲಿ ಎಂ.ಎಲ್.ಎ.ಆಗಿ ಬಂದಿರುವುದು. ಇದರ ಅನುಭವ ನನಗೆ ಚೆನ್ನಾಗಿ ಇದೆ, ಈ ಮೇ, ಜೂನ್ ತಿಂಗಳು ಈ ಎರಡೂ ತಿಂಗಳುಗಳು ಕಳೆದರೆ ಜುಲೈ ತಿಂಗಳ 15ನೇ ತಾರೀಖಿನಿಂದ ಮಾರ್ಕೆಟ್ ಬೆಲೆ ಅಧಿಕವಾಗಿ ಅದಾಗಿಯೆ ಬೆಲೆ ಬರುತ್ತದೆ; ಮತ್ತೆ ಹೋಳಿ, ರಾಮನವಮಿ, ಬರುವವರೆಗೂ ಮಾರ್ಕೆಟ್, ಮಂಡಿ ಆಗುವುದಿಲ್ಲ. ಈ ಎರಡೂ ತಿಂಗಳಲ್ಲಿ ಸಹಜವಾಗಿ ಮಾರ್ಕೆಟ್, ಮಂಡಿ ಇರುತ್ತದೆ. ಆದುದರಿಂದ ಕೇರಳ ಕೊಬ್ಬರಿಯಿಂದ ಏನೂ ಎಫೆಕ್ಟ್ ಆಗುವುದಿಲ್ಲ. ಕೇರಳದಲ್ಲಿ ಇರುವಂತಹ ಕೊಬ್ಬರಿ ಬೇರೆ, ಇವತ್ತು ಕೊಬ್ಬರಿ ಚೆನ್ನಾಗಿದೆ. ನಮ್ಮ ಕರ್ನಾಟಕದಲ್ಲಿ ಏನಾಗಿದೆಯೆಂದರೆ, ನಮ್ಮ ರೈತರು ಒಂದು ತಪ್ಪನ್ನು ಮಾಡಿದ್ದಾರೆ. ಮಾನ್ಯ ಉಪಾಧ್ಯಕ್ಷರೆ, ನಾವು ಮಾತನಾಡುವುದೇ ವರ್ಷಕ್ಕೋ ಅಮಾವಾಸ್ಯೆಗೊ ಪೂರ್ಣಿಮಾಗೊ ಮಾತನಾಡುತ್ತೇವೆ. ತಾವು ಈ ರೀತಿ ಬೆಲ್ ಮಾಡಿದರೆ ನಾವು ದಿನಾ ಮಾತನಾಡುತ್ತೇವೆಯೇ?

**ಉಪಾಧ್ಯಕ್ಷರು :** ತಾವು ಈ ಬಗ್ಗೆ ಸಪರೇಟ್ ಆಗಿ ಒಂದು ನೋಟ್ ಕಳುಹಿಸಿ. ತಾವು ಇದಕ್ಕೆ ಸಹಿ ಮಾಡಿಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಗಮನ ಸೆಳೆಯುವ ಸೂಚನೆಯನ್ನು ಮಾನ್ಯ ಮಾಧುಸ್ವಾಮಿಯವರು ಕೊಟ್ಟಿದ್ದಾರೆ. ನೀವು ಮಧ್ಯೆ ಬಂದರೆ ನಿಮಗೆ ಕ್ಲಾರಿಫಿಕೇಷನ್‌ಗೆ ಒಂದು ನಿಮಿಷ ಕಾಲ ಅವಕಾಶ ಇರುತ್ತದೆ. ನೀವು ಅದನ್ನು ಭಾಷಣ ಮಾಡುವುದಕ್ಕೆ ಹೋದರೆ

ಹೇಗೆ? ನೀವು ಈ ಸಬ್ಜೆಕ್ಟ್ ಮೇಲೆ ಮಾತನಾಡಬೇಕೆಂದರೆ ನೋಟ್ ಕಳುಹಿಸಿ. ಆಗ ನೀವು ಅರ್ಧ ಗಂಟೆ ಕಾಲ ಮಾತನಾಡಿ; ಈ ಒಂದು ನಿಮಿಷದಲ್ಲಿ ಮುಗಿಸಿ.

**ಉಪಾಧ್ಯಕ್ಷರು** : ಮಾನ್ಯ ಎಂ.ಪಿ. ಪ್ರಕಾಶ್‌ರವರು ಮಂತ್ರಿಯವರು ಹೇಳಿ.

**ಶ್ರೀ ಎಂ.ಪಿ. ಪ್ರಕಾಶ್** : ಮಾನ್ಯ ಉಪಾಧ್ಯಕ್ಷರೆ, ನನ್ನಲ್ಲಿ ಮಾಹಿತಿ ಇಲ್ಲದೇ ಇದ್ದ ಕಾರಣದಿಂದ ಮಾನ್ಯ ನೆ.ಲ. ನರೇಂದ್ರಬಾಬುರವರು ನಿಯಮ 73ರಡಿಯಲ್ಲಿ ಪ್ರಸ್ತಾಪ ಮಾಡಿದಂಥ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಮಂತ್ರಿಯವರು ಉತ್ತರವನ್ನು ನಾಳೆ ಕೊಡುತ್ತೇನೆಂದು ಹೇಳಿದ್ದರು. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಬಿ.ಎಸ್. ಹೊರಟ್ಟಿಯವರು, ಸಚಿವರು ಇದಕ್ಕೆ ಸಂಬಂಧಪಟ್ಟಂತೆ ಹೇಳಿಕೆಯನ್ನು ಕಳುಹಿಸಿಕೊಟ್ಟಿದ್ದಾರೆ. ನಾನು ತಮ್ಮ ಅಪ್ಪಣೆಯ ಮೇರೆಗೆ ಇದನ್ನು ಓದುತ್ತಿದ್ದೇನೆ.

## 11. ಮಂತ್ರಿಗಳ ಹೇಳಿಕೆ

**ವಿಷಯ:– ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಸರ್ಕಾರಿ ಶಾಲೆಗಳಲ್ಲಿ 9ನೇ ತರಗತಿ ಆರಂಭಿಸುವ ಬಗ್ಗೆ.**

**ಶ್ರೀ ಎಂ.ಪಿ. ಪ್ರಕಾಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ)** : ಮಾನ್ಯ ಉಪಾಧ್ಯಕ್ಷರೆ,

ರಾಜಾಜಿನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಕನ್ನಡ ಪ್ರೌಢಶಾಲೆ, ಅಗ್ರಹಾರ ದಾಸರಹಳ್ಳಿ ಮತ್ತು ಸರ್ಕಾರಿ ಪ್ರೌಢಶಾಲೆಗಳು 9ನೇ ತರಗತಿ ಆರಂಭಿಸದೇ ಇರುವುದರಿಂದ ಕೃಷ್ಣನಂದ ನಗರದಲ್ಲಿರುವ 8ನೇ ತರಗತಿಯ ವಿದ್ಯಾರ್ಥಿಗಳು ಮತ್ತು ಪೋಷಕರು ಆತಂಕಕ್ಕೊಳಗಾಗಿದ್ದು ಅವರು ವಿದ್ಯಾಭ್ಯಾಸ ಮುಂದುವರಿಸಲಾಗದೆ ಅತಂತ್ರ ಸ್ಥಿತಿಯಲ್ಲಿರುವುದನ್ನು ಪರಿಹರಿಸುವಂತೆ ಅಲ್ಲದೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಹಾಲಕ್ಷ್ಮಿ ಲೇ ಔಟ್, ರಾಜಾಜೀನಗರ 5/6ನೇ ಬ್ಲಾಕ್ ಮತ್ತು ಕಮಲಾನಗರದಲ್ಲಿರುವ [ಉರ್ದು] ಶಾಲೆಗಳು ಖಾಸಗೀ ಕಟ್ಟಡದಲ್ಲಿದ್ದು ಖಾಸಗಿ ಕಟ್ಟಡ ಮಾಲೀಕರಿಗೆ ಬಾಡಿಗೆ ಕಟ್ಟದೇ ಇರುವುದರಿಂದ ಬೀಗ ಮುದ್ರೆ ಹಾಕಿದುದರಿಂದ ಸರ್ಕಾರ